# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **809** |
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್.ಎಸ್ (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12-12-2025 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೇಂದ್ರ ಸರ್ಕಾರದ ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆಗೆ ರಾಜ್ಯ ಸರ್ಕಾರವು ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ ; (ವಿವರ ನೀಡುವುದು) ; | ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆ (PMFME) ಯನ್ನು ಈ ಮೊದಲಿಗೆ ಒಂದು ಜಿಲ್ಲೆ ಒಂದು ಉತ್ಪನ್ನ ಮಾರ್ಗ ವಿಧಾನದಲ್ಲಿ ಅನುಷ್ಠಾನಗೊಳಿಸಲಾಗುತ್ತಿತ್ತು. ಆದರೆ ತದನಂತರ ಒಂದು ಜಿಲ್ಲೆ ಒಂದು ಉತ್ಪನ್ನ ಮಾರ್ಗ ವಿಧಾನಕ್ಕೆ ವಿನಾಯಿತಿ ನೀಡಿ ಜಿಲ್ಲೆಯಲ್ಲಿ ಯಾವುದೇ ಆಹಾರ ಸಂಸ್ಕರಣಾ ಉತ್ಪನ್ನಗಳ ತಯಾರಿಕಾ ಘಟಕ ಸ್ಥಾಪಿಸಲು ಅವಕಾಶ ಕಲ್ಪಿಸಲಾಯಿತು.<br><br>ಈ ಯೋಜನೆಯ ಅನುಷ್ಠಾನಕ್ಕೆ ರಾಜ್ಯ ಸರ್ಕಾರವು ಎಲ್ಲಾ ಅವಶ್ಯಕ ಕ್ರಮಗಳನ್ನು ಕೈಗೊಂಡಿರುತ್ತದೆ. ರಾಜ್ಯ ಮಟ್ಟದ ಸಮಿತಿ ಮತ್ತು ಜಿಲ್ಲಾ ಮಟ್ಟದ ಸಮಿತಿಗಳನ್ನು ರಚಿಸಲಾಗಿರುತ್ತದೆ. ರಾಜ್ಯ ನೋಡಲ್ ಏಜೆನ್ಸಿಯಾಗಿ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (ಕೆಪೆಕ್) ಸಂಸ್ಥೆಯನ್ನು ನೇಮಿಸಲಾಗಿದೆ. ರಾಜ್ಯ ತಾಂತ್ರಿಕ ಸಂಸ್ಥೆಯಾಗಿ ಕೇಂದ್ರಿಯ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ (CFTRI)ಯನ್ನು ಗುರುತಿಸಲಾಗಿರುತ್ತದೆ. 2020-21ನೇ ಸಾಲಿನಲ್ಲಿ ಸದರಿ ಯೋಜನೆಯು ಅನುಷ್ಠಾನಗೊಂಡಿದ್ದು ಪ್ರಗತಿಯಲ್ಲಿರುತ್ತದೆ. ಈ ವರೆಗೂ ಸದರಿ ಯೋಜನೆಯಡಿಯಲ್ಲಿ ಆಹಾರ ಸಂಸ್ಕರಣಾ ಘಟಕ ಸ್ಥಾಪಿಸಲು 7993 ಫಲಾನುಭವಿಗಳಿಗೆ ಸಹಾಯಧನಕ್ಕಾಗಿ ಸಾಲ ಮಂಜೂರಾತಿಯಾಗಿರುತ್ತದೆ. |
| ಆ) | ಈ ಯೋಜನೆಯ ಅನ್ವಯ ಎಷ್ಟು ಜಿಲ್ಲೆಗಳಲ್ಲಿ ಯಾವ ಯಾವ ಉತ್ಪನ್ನಗಳನ್ನು ಗುರುತಿಸಲಾಗಿದೆ, (ಜಿಲ್ಲಾವಾರು ವಿವರ ನೀಡುವುದು); | ಜಿಲ್ಲಾವಾರು ಗುರುತಿಸಲಾದ ಉತ್ಪನ್ನಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| ಇ) | ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಸರ್ಕಾರವು ಯಾವ ರೀತಿಯ ಪ್ರೋತ್ಸಾಹ ನೀಡುತ್ತದೆ? (ತೆರಿಗೆ ವಿನಾಯಿತಿ ಹಾಗೂ ಇತರೆ | ಈ ಯೋಜನೆಯಡಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 60:40 ಅನುಪಾತದಂತೆ ಶೇ.35 ರಷ್ಟು ಸಾಲ ಸಂಪರ್ಕಿತ ಸಹಾಯಧನವನ್ನು ನೀಡುತ್ತಿದೆ. ಇದಲ್ಲದೇ, ರಾಜ್ಯ ಸರ್ಕಾರವು ಹೆಚ್ಚುವರಿಯಾಗಿ ಶೇ.15 ರಷ್ಟು |

| | | |
|---|---|---|
| | ರಿಯಾಯಿತಿಗಳ ಬಗ್ಗೆ ಸಂಪೂರ್ಣ ವಿವರ ನೀಡುವುದು) | ಸಹಾಯಧನವನ್ನು (Top-up) ನೀಡುತ್ತಿದೆ. ಅರ್ಹಫಲಾನುಭವಿಗಳಿಗೆ ನೀಡಲಾಗುವ ಒಟ್ಟಾರೆ ಗರಿಷ್ಟ ಸಹಾಯಧನ ರೂ.15.00 ಲಕ್ಷಗಳಾಗಿದ್ದು, ಇದರಲ್ಲಿ ರಾಜ್ಯದ ಪಾಲು ರೂ.9.00 ಲಕ್ಷ ಹಾಗೂ ಕೇಂದ್ರದ ಪಾಲು ರೂ.6.00 ಲಕ್ಷಗಳಾಗಿರುತ್ತವೆ. |

*ಕೃಇ 221 ಎಎಂಎಸ್ 2025*

(ಎನ್.ಚಲುವರಾಯಸ್ವಾಮಿ)
ಕೃಷಿ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೇಶವ ಪ್ರಸಾದ್.ಎಸ್ ಇವರು ಮಂಡಿಸಿರುವ ಚುಕ್ಕೆ ರಹಿತ ಪ್ರ.ಸಂ: 809ಕ್ಕೆ ಸಂಬಂಧಿಸಿದ**

**ಅನುಬಂಧ**

PMFME ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯದ ಜಿಲ್ಲಾವಾರು ಒಂದು ಜಿಲ್ಲೆ ಒಂದು ಉತ್ಪನ್ನ (ODOP)

| ಕ್ರಮ ಸಂಖ್ಯೆ | ಜಿಲ್ಲೆ | ODOP ಉತ್ಪನ್ನ |
|---|---|---|
| 1 | ಬಾಗಲಕೋಟೆ | ಬೆಲ್ಲ |
| 2 | ಬೆಳಗಾವಿ | ಬೆಲ್ಲ |
| 3 | ಬಳ್ಳಾರಿ | ಅಂಜೂರ ಆಧಾರಿತ ಉತ್ಪನ್ನಗಳು |
| 4 | ಬೆಂಗಳೂರು ಗ್ರಾಮಾಂತರ | ಕುಕ್ಕುಟ ಉತ್ಪನ್ನಗಳು |
| 5 | ಬೆಂಗಳೂರು ನಗರ | ಬೇಕರಿ ಉತ್ಪನ್ನಗಳು |
| 6 | ಬೀದರ್ | ಶುಂಠಿ ಆಧಾರಿತ ಉತ್ಪನ್ನಗಳು |
| 7 | ಚಾಮರಾಜನಗರ | ಅರಿಶಿನ |
| 8 | ಚಿಕ್ಕಬಳ್ಳಾಪುರ | ಟೊಮೇಟೊ ಆಧಾರಿತ ಉತ್ಪನ್ನಗಳು |
| 9 | ಚಿಕ್ಕಮಗಳೂರು | ಮಸಾಲೆ ಉತ್ಪನ್ನಗಳು |
| 10 | ಚಿತ್ರದುರ್ಗ | ಶೇಂಗಾ ಆಧಾರಿತ ಉತ್ಪನ್ನಗಳು |
| 11 | ದಕ್ಷಿಣ ಕನ್ನಡ | ಸಮುದ್ರ ಉತ್ಪನ್ನಗಳು |
| 12 | ದಾವಣಗೆರೆ | ಸಿರಿಧಾನ್ಯ |
| 13 | ಧಾರವಾಡ | ಮಾವಿನ ಆಧಾರಿತ ಉತ್ಪನ್ನಗಳು |
| 14 | ಗದಗ | ಬ್ಯಾಡಗಿ ಮೆಣಸಿನಕಾಯಿ |
| 15 | ಹಾಸನ | ತೆಂಗಿನಕಾಯಿ ಉತ್ಪನ್ನಗಳು |
| 16 | ಹಾವೇರಿ | ಮಾವಿನ ಆಧಾರಿತ ಉತ್ಪನ್ನಗಳು |
| 17 | ಕಲಬುರಗಿ | ತೊಗರಿ ಆಧಾರಿತ ಉತ್ಪನ್ನಗಳು |
| 18 | ಕೊಡಗು | ಕಾಫಿ |
| 19 | ಕೋಲಾರ | ಟೊಮೇಟೊ ಆಧಾರಿತ ಉತ್ಪನ್ನಗಳು |
| 20 | ಕೊಪ್ಪಳ | ಸೀಬೆಹಣ್ಣು ಆಧಾರಿತ ಉತ್ಪನ್ನಗಳು |
| 21 | ಮಂಡ್ಯ | ಬೆಲ್ಲ |
| 22 | ಮೈಸೂರು | ಬಾಳೆಹಣ್ಣು ಆಧಾರಿತ ಉತ್ಪನ್ನಗಳು |
| 23 | ರಾಯಚೂರು | ಮೆಣಸಿನಕಾಯಿ ಆಧಾರಿತ ಉತ್ಪನ್ನಗಳು |
| 24 | ರಾಮನಗರ | ತೆಂಗಿನಕಾಯಿ ಉತ್ಪನ್ನಗಳು |
| 25 | ಶಿವಮೊಗ್ಗ | ಅನಾನಸ್ ಆಧಾರಿತ ಉತ್ಪನ್ನಗಳು |
| 26 | ತುಮಕೂರು | ತೆಂಗಿನಕಾಯಿ ಉತ್ಪನ್ನಗಳು |
| 27 | ಉಡುಪಿ | ಸಮುದ್ರ ಉತ್ಪನ್ನಗಳು |
| 28 | ಉತ್ತರ ಕನ್ನಡ | ಮಸಾಲೆ ಉತ್ಪನ್ನಗಳು |
| 29 | ವಿಜಯಪುರ | ಲಿಂಬೆ/ನಿಂಬೆ ಆಧಾರಿತ ಉತ್ಪನ್ನಗಳು |
| 30 | ಯಾದಗಿರಿ | ಶೇಂಗಾ ಆಧಾರಿತ ಉತ್ಪನ್ನಗಳು |
| 31 | ವಿಜಯನಗರ | ಶೇಂಗಾ ಆಧಾರಿತ ಉತ್ಪನ್ನಗಳು |